ಹಾಡ್ಯ ಜಯಾನಂದ, ಮೈಸೂರು
*ಇಲ್ಲೊಬ್ಬರು ಆಂಟಿ ನಮ್ಮ ಮನೆ ದೋಸೆ ತೂತೇ ಆಗಲ್ಲ ಅನ್ನುತ್ತಾರಲ್ಲಾ...?*



ಹೊಯ್ದ ದಪ್ಪಕ್ಕೆ ಅದನ್ನು ಪಿಜ್ಜಾದೋಸೆ ಎಂದು ಕರೆಯುತ್ತಾರಂತೆ!

ಗೀತಾ ಬರ್ಲ, ಬೆಂಗಳೂರು
*ನಾವು ಬೇಕೆಂದು ಹುಡುಕಿದಾಗ ಸಿಗುವುದಿಲ್ಲ, ಬೇಡವೆಂದಾಗ ಸಿಗುತ್ತದೆ. ಈ ವಸ್ತು ಯಾವುದು?*
ಕೇ!

ಗೌರಿ ಶೇಷಾದ್ರಿ, ಉತ್ತನಹಳ್ಳಿ
*ಪರಿಸರಕ್ಕಿಂತ ಹೆಚ್ಚಾಗಿ ಮನುಷ್ಯರ ಮನಸ್ಸು ಮತ್ತು ದೇಹ ಮಲಿನಗೊಳ್ಳುತ್ತಿದೆಯಲ್ಲಾ, ಕಾರಣವೇನು ಸರ್?*
ಮನೋವಿಕಾಸಕ್ಕೆ ಕೊರತೆ, ದೇಹವಿಕಾಸಕ್ಕೆ ಒರತೆ ಇರುವುದರಿಂದ!

ಆರ್. ಮಧುಸೂದನ್, ಹಾಸನ
*ಅರಳುವ ಹೂವುಗಳೆಲ್ಲಾ ಪ್ರೇಮಪೂಜೆಗೆ ಬರುವುದಿಲ್ಲ ಅಂತಾರಲ್ಲಾ...?*



ಹೌದು; ನಸುಕಿನಲ್ಲಿಯೇ ಯಾರೋ ಕೊಕ್ಕೆ ಹಾಕಿ ಕಿತ್ತುಕೊಂಡುಹೋಗಿ ಬಿಡುತ್ತಾರೆ.

ಮಾಲತಿರಾಜು, ಬೆಂಗಳೂರು
*ಮನೆಯಳಿಯನಾಗುವುದು ಒಳಿತೋ, ಹೆಂಡತಿಯ ಗುಲಾಮನಾಗಿರುವುದು ಒಳಿತೋ?*
ಮನೆಗೆ ಹೋಲ್‌ಸೇಲ್ ಗುಲಾಮನಾಗುವುದಕ್ಕಿಂತ ಹೆಂಡತಿಗೆ ರೀಟೇಲ್ ಗುಲಾಮನಾಗುವುದೇ ಒಳಿತು.

ಎಸ್.ಶ್ರೀಧರ್, ಬೆಂಗಳೂರು
*ಜತೆಯಾಗಿ ನಕ್ಕರೆ ಸ್ನೇಹ, ಜತೆಯಾಗಿ ಅತ್ತರೆ?*
ಸ್ನೇಹಿತರು ಫುಲ್ ಟೈಟ್!

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ಹೆಂಗಸಿಗೆ ಗಯ್ಯಾಳಿ ಎನ್ನುತ್ತಾರೆ, ಗಂಡಸಿಗೆ...?*
ಗಯ್ಯಾಳಿಯ ಗಂಡ!

ಎಚ್.ಆರ್. ದೇಸಾಯಿ, ರಾಯಚೂರು
*ಮಂತ್ರಕ್ಕೆ ಮಾವಿನಕಾಯಿ ಉದುರುವುದಿಲ್ಲವೆಂದು ತಿಳಿದೂ ನಾವೇಕೆ ಸಾವಿರಾರು ವರ್ಷಗಳಿಂದ ಮಂತ್ರಗಳನ್ನು ಉಚ್ಚರಿಸುತ್ತಲೇ ಇದ್ದೇವೆ?*
ಮಾವಿನಕಾಯಿ ಉದುರದಿದ್ದರೂ ಮಾವನ ಮಗಳು ಒದಗುತ್ತಿದ್ದಾಳಲ್ಲಾ...!

ಕೆ. ಹರೀಶ್‌ಕುಮಾರ್, ಪುತ್ತೂರು
*ಹೊಟ್ಟೆ-ಬಟ್ಟೆ ಕಟ್ಟಿ ಬೆಳೆಸಿದ ಮಗ ಮೀಸೆ ಬಂದ ತಕ್ಷಣ ದೇಶ ತಿರುಗುವುದು ಯಾಕೆ?*
ಮೀಸೆ ಬಂದರೆ ದೇಶ ಕಾಣದು ಎಂಬ ಗಾದೆ ನಿಜವೋ ಸುಳ್ಳೋ ಎಂದು ತಿಳಿಯಲು!

ಸಿ.ಎ. ಹಿರೇಮಠ್, ಶಿವಮೊಗ್ಗ
*ಅಭಿವೃದ್ಧಿ ಎಂದರೆ ಕೆರೆಗಳನ್ನು ಮುಚ್ಚುವುದೆ?*
ಅಲ್ಲ, ಕೆರೆಗಳನ್ನು ಮುಕ್ಕುವುದು!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಸುರಿಯುವ ಮಳೆ, ಹರಿಯುವ ಹೊಳೆ, ನಗುವ ಹೆಣ್ಣು ಕೈಗೆ ಸಿಗದೇ ಇರುವುದರ ರಹಸ್ಯ?*
ಕಳೆ ಹೋಗಿ ಕೊಳೆಯಾಗಿಬಿಡುವವೆಂಬ ಕಳಕಳಿ!

ರಮೇಶ್, ಹನುಮನಾಳು
*ಎಲ್ಲಾ ಅನಾರೋಗ್ಯವನ್ನೂ ಮಹಾಮಾರಿ ದೇವತೆಗೆ ಹೋಲಿಸುವುದೇಕೆ?*
ಅವು ಮನೆಗೆ ಮಾರಿ, ವೈದ್ಯರಿಗೆ ಉಪಕಾರಿಯಾದ್ದರಿಂದ!

ಶ್ರೀಮತಿ ಸುನಂದಮ್ಮ, ಗೌರಿಬಿದನೂರು
*ರುಚಿರುಚಿಯಾದ ಅಡಿಗೆ ಮಾಡಿಕೊಂಡು ತಿನ್ನುವುದೇಕೆ, ಮುಸುರೆ ಪಾತ್ರೆಗಳನ್ನು ಕೆಲಸದಾಕೆಗೆ ಒಪ್ಪಿಸುವುದೇಕೆ, ವಾಕಿಂಗ್‌ಗೆ ಹೋಗುವುದೇಕೆ?*
ದಿನಸಿ ಅಂಗಡಿಯವರು, ಕೆಲಸದಾಕೆ ಮತ್ತು ತಮ್ಮ ಹಿತದೃಷ್ಟಿಯಿಂದ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಮಾಜಿ ಮುಖ್ಯಮಂತ್ರಿಗಳಿಗೆ ಭಂಡ ಪ್ರಚಂಡ ಎಂಬ ಬಿರುದು ನೀಡಬೇಕೆಂದಿದ್ದೇನೆ, ನೀವೇನಂತೀರಿ?*
ಒಳ್ಳೆಯ ಆಯ್ಕೆ. ಅಧ್ಯಕ್ಷತೆಗೆ ಅಣ್ಣನನ್ನು ಕರೆಯಲು ಮರೆಯಬೇಡಿ.

## ಬಹುಮಾನಿತ ಪ್ರಶ್ನೆ

ಡಿ.ಎಲ್. ನಾಗರಾಜ್, ಚನ್ನಗಿರಿ
*ಗೋಹತ್ಯಾ ನಿಷೇಧ ಓಕೆ, ಆಡು, ಕುರಿಗಳ ಹತ್ಯೆ ಯಾಕೆ?*
ಅದು ಕಾಳಿ, ದುರ್ಗಿ, ಗ್ರಾಮದೇವತೆಗಳ ಡಯಟ್ ಫುಡ್ ಅಂತೆ!

ಜಾಕಬ್ ಡಿಸೋಜ, ಕುರುವಳ್ಳಿ
*ಗಾಳಿ, ನೀರು, ಬೆಂಕಿ ಐದು ನಿಮಿಷ ಹರತಾಳ ಆಚರಿಸಿದರೆ ಏನಾಗಬಹುದು?*
ಹೋಲ್‌ಸೇಲ್ ಶವಸಂಸ್ಕಾರಕ್ಕೆ ಬೆಂಕಿ ಓವರ್ ಟೈಮ್ ವರ್ಕ್ ಮಾಡಬೇಕಾಗುವುದು!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಹಸೆಮಣೆ ಏರುವ ಹೆಣ್ಣಿಗೂ, ಹೊಸಿಲು ದಾಟಿಹೋಗುವ ಹೆಣ್ಣಿಗೂ ಏನು ವ್ಯತ್ಯಾಸ?*
ಎರಡೂ ಸಂಭ್ರಮದ ವಿಷಯಗಳೇ; ವರ್ಷ ತುಂಬಿದ ಹೆಣ್ಣು ಹೊಸಿಲು ದಾಟಿದಾಗ ಅಜ್ಜಿಗೆ ಸಂಭ್ರಮವೋ ಸಂಭ್ರಮ!

ಎನ್.ವಿ.ಶ್ರೀನಿವಾಸ್, ಮೈಸೂರು
*ಹೋಗಿ ಬರ್ತೀನಿ, ಹೋಗಿ ಬರ್ತೀನಿ ಅಂತ ಕೆಲವರು ನಿಂತೇ ಇರುತ್ತಾರಲ್ಲಾ...?*




ಪಾಪ! ಸಂಕೋಚದ ಸ್ವಭಾವದವರು; ಅವರಿಗೆ ಕೊಡಬೇಕಾದದ್ದನ್ನ ಬೇಗ ಕೊಟ್ಟು ಕಳುಹಿಸಬಾರದೇ...!

ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ
*ಅಣ್ಣಾ ಹಜಾರೆ ರಾಷ್ಟ್ರಪತಿಯಾಗಿ ಬಾಬಾ ರಾಮ್‌ದೇವ್ ಪ್ರಧಾನಿಯಾದರೆ ಭ್ರಷ್ಟಾಚಾರ ಕೊನೆಗೊಳ್ಳಬಹುದೆ?*
ಆ ಯೋಗ ಹಜಾರ್ ವರ್ಷಗಳ ಕಾಲ ಬಾ ಬಾ ಎಂದು ಕರೆದರೂ ನಮಗೆ ದೊರಕದು ಬಿಡಿ.

■ ರಾಮ್